ರೂಟಿನಲ್ಲಿ ಬದುಕು ನನ್ನನ್ನು ಮೂಲೆಗೆ ಹಾಕಿ ಅಮುಕತ್ತೆ. ಅಲ್ಲಿಯೇ ನಾನು ಕಲೀತಾ ಹೋಗ್ತೀನಿ.

ನಾನು ಇಂದಿನವರೆಗೆ ಪ್ರತಿಯೊಂದನ್ನು ಕಲಿತಿದ್ದೂ ಊಟಕ್ಕೋಸ್ಕರ. ಊಟ ಬೇಕೇ ಬೇಕು. ಯಾವಾಗ ನೀವು ಮಾಡುವ ಕೆಲಸ ನಿಮ್ಮ ಊಟಕ್ಕೆ ಅನಿವಾರ್ಯ ಆಗುತ್ತದೆಯೋ, ಆಗ ನಿಮ್ಮೆಲ್ಲ ಟ್ಯಾಲೆಂಟೂ ಓಪನ್ನಾಗಿಬಿಡತ್ತೆ. ನಾನು ಚಿತ್ರ ಬರೆದೆ, ದುಡ್ ಕೊಟ್ರು. ಚಿತ್ರಕಲೆ ಮತ್ತು ಬದುಕಿನ ಅನುಭವ ಸೇರಿಸಿ ಸಿನಿಮಾ ಮಾಡ್ದೆ, ಮತ್ತೆ ದುಡ್ ಕೊಟ್ರು. ಪ್ರತಿಭೆ ತೋರಿಸೋದೆಲ್ಲ ಸರಿ, ಆದರೆ ಯಾವಾಗ ಅದು ಬದುಕಿಗೇ ಆಗಬೇಕು ಅಂತ ಆಗುತ್ತಲ್ಲ – ಆಗ ಆ ಕೆಲಸವನ್ನು ಎಲ್ಲರೂ ಚೆನ್ನಾಗಿಯೇ ಮಾಡುತ್ತಾರೆ.

● ನೀವು ಬದುಕಿನಲ್ಲಿ ಕಂಡ ಅನುಭವಗಳು ಸಿನಿಮಾ ಆಗಿ ರೂಪುಗೊಳ್ಳುವ ಪ್ರಕ್ರಿಯೆ ಹೇಗಿರುತ್ತದೆ?

'ದುನಿಯಾ' ಸಿನಿಮಾದಿಂದ ಇಲ್ಲಿಯವರೆಗೆ ನಾನು ನನ್ನ ಸಿನಿಮಾಗಳಲ್ಲಿ ಬಳಸಿರುವ ಯಾವ ಅಂಶವೂ ನನ್ನದಲ್ಲ. ದುನಿಯಾದಲ್ಲಿ ತಾಯಿಯನ್ನು ಮಣ್ ಮಾಡೋಕೆ ಹೋದಾಗ ನಾಯಕ ಎದುರಿಸುವ ದೃಶ್ಯ ಇದೆಯಲ್ಲ, ಅದು ನಿಮಗೆ ಆಗಿದ್ಯಾ ಅಂತ ಸುಮಾರು ಜನರು ನನ್ನ ಕೇಳ್ತಿರ್ತಾರೆ. ಇದರ ತಾತನಂಥ ಅನುಭವಗಳನ್ನು ಹಾದು ಬಂದಿದೀನಿ. ನನ್ನ ಲೈಫಲ್ಲಿ ಕಂಡದ್ದೆಲ್ಲವನ್ನೂ ಸಿನಿಮಾದಲ್ಲಿ ಹೇಳೋಕೆ ಆಗಲ್ಲ, ಅಂಥದ್ದೆಲ್ಲ ಕಣ್ಮುಂದೆ ನಡೆದುಹೋಗಿದೆ. ನಾವು ಕಂಡ ಬದುಕನ್ನು ಯಥಾವತ್ತಾಗಿ ಇಡೋದಲ್ಲ ಕಲೆ. ಸಿನಿಮಾಕ್ಕೆ ಎಷ್ಟು ಬೇಕೋ, ಅದರಲ್ಲಿ ಹೇಗೆ ಹೇಳಬೇಕೋ ಹಾಗೆ, ಚಿತ್ರಮಂದಿರಕ್ಕೆ ಬಂದು ಕೂಡುವ ಆರುನೂರು ಜನರಿಗೆ ಡಿಸ್ಟರ್ಬ್ ಆಗದ ಹಾಗೆ ಒಂದಿಷ್ಟು ಹೇಳ್ತಿದೀನಿ ಅಷ್ಟೆ. ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬಲ್ಲೆ. ಸಮಾಜಕ್ಕೆ ಕೆಡುಕಾಗುವಂತಹದ್ದನ್ನು ನನ್ನ ಸಿನಿಮಾಗಳಲ್ಲಿ ತೋರಿಸುವುದಿಲ್ಲ.

● ನಿಮ್ಮ ಪ್ರಕಾರ ಸಿನಿಮಾ ಆಗುವುದು ಹೇಗೆ?

ಇದು ನಮ್ಮಲ್ಲಿ ಬಹಳ ಜನರಿಗೆ ಇರುವ ಪ್ರಶ್ನೆ. ನನ್ನ ಬಳಿ ಸಿನಿಮಾ ಹೇಗಾಗತ್ತೆ ಎಂದು ಯಾರಾದ್ರೂ ಕೇಳಿದ್ರೆ ನಾನು 'ಪೇಂಟಿಂಗ್ ಅಂದ್ರೆ ಏನು? ಮ್ಯೂಸಿಕ್ ಅಂದ್ರೆ ಏನು?' ಅಂತ ಕೇಳಿಬಿಡ್ತೀನಿ. ಹಾಗೆ ಹೇಳೋಕೆ ಸಾಧ್ಯನಾ ಅದು?

● ಇದು ಎಲ್ಲ ಕಲೆಗಳಲ್ಲಿಯೂ ಇರುವ ಗೊಂದಲ ಅಲ್ವಾ ಇದು?

ಗೊಂದಲ ಇಲ್ಲ. ಗೊಂದಲ ಎಂದುಕೊಂಡಿದ್ದಾರೆ ಅಷ್ಟೇ. ಕ್ಲಾರಿಟಿ ಇಲ್ಲ ಅಷ್ಟೇ. ತುಂಬ ಸರಳ ಅದು. ನನಗೆ ಸ್ಪಷ್ಟತೆ ಇರೋದಕ್ಕೆ ನಾನು ಹಿಂಗಿದೀನಿ. ನನಗೆ ಯಾವ ಪ್ರಶ್ನೆಗಳೂ ಇಲ್ಲ. ನಾಳೆ ಯಾರೋ ನನ್ನ ಬಳಿ ಬಂದು 'ಹಿಮಾಲಯದ ಮೇಲೆ ಸಾಧು ಸಂತರೆಲ್ಲ ಹೋಗ್ತಾರಲ್ಲಾ, ಅಲ್ಲಿ ಅವ್ರಿಗೇನೋ ಆಗುತ್ತದಂತೆ. ಅದ್ರ ಮೇಲೆ ಒಂದು ಸಿನಿಮಾ ಮಾಡೋಣ' ಅಂದ್ರೆ ದೇವ್ರಾಣೆ ನಾನು ಅಲ್ಲಿಯವರೆಗೂ ಹೋಗೊಲ್ಲ. ನನ್ನ ಬದುಕಲ್ಲಿ, ನನಗಿರೋ ಟೈಮಲ್ಲಿ, ಫುಡ್ಡಿಗೆ ಆರಾಮಾಗಿ ಸಿಗ್ತಿರೋವಾಗ, ಈ ಸಿನಿಮಾ ಭಾಷೆಯ ಮೇಲೆ ನನಗೊಂದು ಗ್ರಿಪ್ ಇರುವಾಗ ನಾನು ಅಲ್ಲಿಗೇಕೆ ಹೋಗಲಿ?

ನಾನು ಆದಷ್ಟೂ ಸುಲಭ ಮಾಡಿಕೊಳ್ತೇನೆ. ಜನಕ್ಕೆ ಎಷ್ಟು ಹೇಳಿದ್ರೆ ಸಾಕೋ ಅಷ್ಟೇ ಹೇಳ್ತೀನಿ. ನಾನು ಇಲ್ಲಿ ಬಂದಿರೋದು ಫುಡ್ಡಿಗೋಸ್ಕರ. ಊಟ ಮಾಡ್ಬೇಕು. ನನ್ನದೊಂದು ರೆಪ್ಲಿಕಾ ಕೊಡಬೇಕು. ಆ ಕೆಲಸ ಆಲ್‌ರೆಡಿ ಆಗೋಗಿದೆ. ನಮ್ಮಲ್ಲಿ ಸುಮಾರು ಜನ ಹೇಳ್ತಾರೆ – 'ಸತ್ತಾಗ